## ಕವಿತೆ




**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ರಾಮಕೃಷ್ಣ ಸಿದ್ರಪಾಲ




# ತವರು ದಾರಿ

ಕಲ್ಲು ಗುಡ್ಡಗಳನು ಇಳಿದು
ಗಿಡಮರಗಳ ಸುತ್ತಿ ಸುಳಿದು
ನಾನು ಹೋಗಬೇಕು ನನ್ನ
ತವರು ಸೇರಲು
ಒಲಿದ ನನ್ನ ಹೃದಯ ಸಾಕು
ದಾರಿ ತೋರಲು

ಹಕ್ಕಿಹಾಡುಗಳನು ಹೊತ್ತು
ತಲೆದೂಗುತ ಹೆಜ್ಜೆ ಇಟ್ಟು
ನನ್ನ ಗತಿಯಲೆನ್ನ ಹಾದಿ
ನಡೆಯುತಿರುವೆನು
ಹಸಿದವರಿಗೆ ನೀರುಣಿಸಲು
ತಡೆಯುತಿರುವೆನು

ಕಾಡ ಗಾಢ ಮೌನದಲ್ಲಿ
ಸಿಂಹ ಇಟ್ಟ ಹೆಜ್ಜೆಯಲ್ಲಿ
ಅಲುಗದಂಥ ನಲುಗದಂಥ
ನಿಲುವ ನೋಡಿದೆ
ಅಲುಗಿ ನಲುಗಿ ಹರಿವ ನಾನು
ನಲಿದು ಹಾಡಿದೆ

ಬಿರುಗಾಳಿಯು ಬೀಸುತಿರಲು
ಮರಗಳುರುಳಿ ತೇಲಿ ಬರಲು
ಕಂಪಿಸಿದ್ದೆನೊಮ್ಮೆ ನಾನು
ಪದಾಘಾತಕೆ
ಹೇಳಿಕೊಂಡೆ ಹೀಗೆ ಹೆದರಿ
ಬದುಕಲೇತಕೆ?



ಹಾಡು ಹೊರೆ ತುಂಬಿಕೊಂಡು
ಹರುಷ ದುಃಖವೆಲ್ಲ ಕಂಡು
ಕಾಡು ಮೇಡು ನಾಡುಗಳಲಿ
ಹರಿಯುತಿರುವೆನು
ದಬದಬೆಯಲಿ ಸೊಕ್ಕಿ ಉಕ್ಕಿ
ಸುರಿಯುತಿರುವೆನು

ಮೇಲೆ ಬಾನು ಕೆಳಗೆ ನೆಲ

ಇಲ್ಲಿ ರೈತ ಉತ್ತ ಹೊಲ
ನನ್ನ ತವರು ಅದೋ ಅಲ್ಲಿ
ಕಾಯುತಿರುವುದು
ಕೈ ಬೀಸುತ ಕೂಗಿ ಕೂಗಿ
ಕರೆಯುತಿರುವುದು

ನಾನು ತುಂಬಿ ಹರಿವ ನದಿ
ಲೋಕ ನನ್ನ ಎರಡು ಬದಿ
ನಾನು ಹೋಗಬೇಕು ನನ್ನ
ಬಳಗ ಕೂಡಲು
ಮೊರೆವ ತೆರೆಗಳಾಟದಲ್ಲಿ
ಸೇರಿಕೊಳ್ಳಲು

